# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.27/100 ಬಾಣಸವಾಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 15-10-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರು,**

1. ಶ್ರೀ ವಿನೋದ್.ಕೆ.ಎಂ, ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ ಶ್ರೀಕಾಂತ್.ಕೆ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಶ್ರೀ ಸಂದೀಪ್.ಎಸ್, ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.27/100
4. ಶ್ರೀ ಶ್ರೀಧರ್, ಸ್ಥಳೀಯರು, ಬಾಣಸವಾಡಿ,
5. ಶ್ರೀ ಅಮಿತ್ ನಿಗ್ಲಿ, ಸ್ಥಳೀಯರು, ಬಾಣಸವಾಡಿ
6. ಶ್ರೀಮತಿ ಅಂಜು ಮಿನಾಸ್, ಸ್ಥಳೀಯರು, ಬಾಣಸವಾಡಿ,
7. ಶ್ರೀ ಕ್ರಿಸ್ಟೋಫರ್ ಕ್ರೂಜ್, ಸ್ಥಳೀಯರು, ಬಾಣಸವಾಡಿ

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ಶ್ರೀ ಮಂಜುನಾಥ್, ಸಹಾಯಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ
2. ಶ್ರೀ ಆನಂದ್, ಕಿರಿಯ ಆರೋಗ್ಯ ನಿರೀಕ್ಷಕರು
3. ಶ್ರೀ ಕೆ.ಶಿವಯ್ಯ, ಕೆಲಸ ಪರಿವೀಕ್ಷಕರು,
4. ಶ್ರೀ ದಯಾನಂದ, ಬೀದಿ ದೀಪ ಸೂಪರ್‌ವೈಸರ್
5. ಶ್ರೀ ಶ್ರೀರಾಮ್, ಸ್ಥಳೀಯರು, ಬಾಣಸವಾಡಿ
6. ಶ್ರೀ ಎ. ರಾಯಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು
7. ಶ್ರೀಮತಿ ಮೀನಾ ವೆಂಕಟೇಶ್, ಸ್ಥಳೀಯರು, ಬಾಣಸವಾಡಿ
8. ಶ್ರೀ ವೆಂಕಟೇಶ್, ನಿರೀಕ್ಷಕರು
9. ಶ್ರೀ ಫಕರುದ್ದೀನ್, ಜೆ.ಇ. ಬೆಸ್ಕಾಂ
10. ಶ್ರೀ ಕೆ.ಎಸ್. ರವೀಂದ್ರನಾಥ್, ಅರಣ್ಯಾಧಿಕಾರಿಗಳು
11. ಶ್ರೀ ವಾಲ್ಟರ್ ಜೋಸೆಫ್, ಸ್ಥಳೀಯರು, ಬಾಣಸವಾಡಿ
12. ಶ್ರೀ ಪಿ. ಸದಾಶಿವ, ಸ್ಥಳೀಯರು, ಬಾಣಸವಾಡಿ
13. ಶ್ರೀಮತಿ ಆಯಿಷಾ, ಸ್ಥಳೀಯರು, ಬಾಣಸವಾಡಿ
14. ಶ್ರೀ ಜೂಡ್ ರಾಜೇಶ್ ಫೆರಿನೊ, ಸ್ಥಳೀಯರು, ಬಾಣಸವಾಡಿ
15. ಶ್ರೀ ವೆಂಕಟೇಶ್, ಸ್ಥಳೀಯರು, ಬಾಣಸವಾಡಿ
16. ಶ್ರೀಮತಿ ರೇಖಾ ಸಜಿತ್, ಸ್ಥಳೀಯರು, ಬಾಣಸವಾಡಿ
17. ಶ್ರೀ ಪ್ರಶಾಂತ್, ಸ್ಥಳೀಯರು, ಬಾಣಸವಾಡಿ
18. ಶ್ರೀ ಎಸ್. ಗೋಪಾಲ್, ಸ್ಥಳೀಯರು, ಬಾಣಸವಾಡಿ
19. ಶ್ರೀ. ಕೆ. ವಿಶ್ವನಾಥನ್, ಸ್ಥಳೀಯರು, ಬಾಣಸವಾಡಿ
20. ಶ್ರೀಮತಿ ವಿದ್ಯಾಶಂಕರ್, ಸ್ಥಳೀಯರು, ಬಾಣಸವಾಡಿ
21. ಶ್ರೀ ಶಂಕರ್. ಟಿ.ಆರ್, ಸ್ಥಳೀಯರು, ಬಾಣಸವಾಡಿ
22. ಶ್ರೀ ರಾಜಶೇಖರ್ ಎಲ್. ಸ್ಥಳೀಯರು, ಬಾಣಸವಾಡಿ

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು, ಮಾಜಿ ಪಾಲಿಕೆ ಸದಸ್ಯರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರಸಂ | ಚರ್ಚಿಸಿದ ವಿಷಯಗಳು | ಸಂಬಂಧಪಟ್ಟ ಇಲಾಖೆ |
|---|---|---|
| 1 | ವಾರ್ಡ್ ವ್ಯಾಪ್ತಿಯ 2ನೇ ಡಿ ಅಡ್ಡರಸ್ತೆ, ಓ.ಎಂ.ಬಿ.ಆರ್ ಲೇಔಟ್ ಹಾಗು 3ನೇ ಎ ಕ್ರಾಸ್ ನಲ್ಲಿ ರಸ್ತೆ ಗುಂಡಿಗಳು ಹೆಚ್ಚಾಗಿದ್ದು, ಇವುಗಳನ್ನು ಮುಚ್ಚದೇ ಇರುವುದರಿಂದ ವಾಹನ ಸವಾರರು ಬಿದ್ದು, ಸವಾರರಿಗೆ ತೊಂದರೆಯಾಗುವ ಸಾಧ್ಯತೆ ಇರುವುದರಿಂದ, ರಸ್ತೆ ಗುಂಡಿಗಳನ್ನು ಕೂಡಲೇ ಮುಚ್ಚಲು ಕ್ರಮ ವಹಿಸಲು ಸ್ಥಳೀಯರು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP** |
| 2 | ವಾರ್ಡ್ ವ್ಯಾಪ್ತಿಯ ಸಿ.ಎಂ.ಆರ್.ರಸ್ತೆ, ಆಕ್ಸಿಸ್ ಬ್ಯಾಂಕ್‌ನ ಹತ್ತಿರ ನಮ್ಮ ಲೋಕಲ್ ಹೋಟೆಲ್, ವೇಲುಮಾರಿ ದೇವಸ್ಥಾನ, 2 ಕೆ ಕ್ರಾಸ್, 9ನೇ ಮೇನ್, 5ನೇ ಮೇನ್, 4ನೇ ಡಿ ಕ್ರಾಸ್ ಹಾಗೂ 8ನೇ ಮೇನ್ 3ನೇ ಕ್ರಾಸ್ ಜಂಕ್ಷನ್, ಹಾಗೂ 1ನೇ ಮುಖ್ಯರಸ್ತೆ ವಿಜಯಾ ಬ್ಯಾಂಕ್ ಕಾಲೊನಿಯ ಬ್ಲೂ ಹೆವೆನ್ ಹೋಟೆಲ್‌ನವರು ರಸ್ತೆಯನ್ನು ಅತಿಕ್ರಮಿಸಿದ್ದು, ವಾಹನ ಸವಾರರಿಗೆ ಓಡಾಡಲು ತೊಂದರೆಯಾಗುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE** ಹಿರಿಯ ಆರೋಗ್ಯ ಪರಿವೀಕ್ಷಕರು |
| 3 | ವಾರ್ಡ್ ವ್ಯಾಪ್ತಿಯ 7ನೇ ಎ ಮೇನ್, 7ನೇ ಬಿ ಮೇನ್‌ಗಳಲ್ಲಿ ಇತ್ತೀಚೆಗೆ ಬೀಳುತ್ತಿರುವ ಮಳೆಯಿಂದ ಮರಗಳ ಕೊಂಬೆ ರೆಂಬೆಗಳು ಮುರಿದು ಹೋಗಿದ್ದು, ಅವುಗಳನ್ನು ಕೂಡಲೇ ಸದರಿ ಸ್ಥಳದಿಂದ ತೆರವುಗೊಳಿಸಲು ಸಭೆಗೆ ತಿಳಿಸಿದರು. | (ವಲಯ ಅರಣ್ಯಾಧಿಕಾರಿಗಳು)<br>**(Forest Department)**<br>ವಾರ್ಡ್ ವ್ಯಾಪ್ತಿಯಲ್ಲಿರುವ ಹಳೆಯ ಮರದ ಕೊಂಬೆ ರೆಂಬೆಗಳನ್ನು ತೆರವುಗೊಳಿಸಲು ಕ್ರಮ ವಹಿಸುವುದು |
| 4 | ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ ಹೆಚ್‌ಆರ್‌ಬಿಆರ್ ಲೇಔಟ್, 2ನೇ ಬ್ಲಾಕ್‌ನ 3ನೇ ಎ ಕ್ರಾಸ್, 3ನೇ ಬಿ ಕ್ರಾಸ್, ಹಾಗೂ 3ನೇ ಡಿ ಕ್ರಾಸ್ ಗಳಲ್ಲಿ ಬೀದಿ ದೀಪಗಳು ಉರಿಯದೇ ಇರುವುದರಿಂದ ಈ ಪ್ರದೇಶದಲ್ಲಿ ರಾತ್ರಿ ಸಮಯದಲ್ಲಿ ಓಡಾಡುವ ನಾಗರೀಕರಿಗೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಕ್ರಮ ವಹಿಸಲು ಸಭೆಗೆ ತಿಳಿಸಿದರು. | **ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೀದಿ ದೀಪಗಳ ವಿಭಾಗ-ಪೂರ್ವ ವಲಯ**<br>ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ದಯಾನಂದ, ಬೀದಿ ದೀಪ ಸೂಪರ್‌ವೈಸರ್ ರವರಿಗೆ ಸದರಿ ಪ್ರದೇಶದಲ್ಲಿ ಬೀದಿ ದೀಪಗಳನ್ನು ದುರಸ್ಥಿಪಡಿಸಲು ಸಭೆಯಲ್ಲಿ ತಿಳಿಸಲಾಯಿತು. |
| 5 | ಹೆಚ್.ಆರ್.ಬಿ.ಆರ್. ಲೇಔಟ್, 2ನೇ ಬ್ಲಾಕ್, 5ನೇ ಸಿ ಕ್ರಾಸ್, ವಿಜಯ ಬ್ಯಾಂಕ್ ಕಾಲೋನಿಯಲ್ಲಿ ಬೆಳಿಗ್ಗೆ ಸುಮಾರು 3.00 ಗಂಟೆಯಿಂದ 4.00 ಗಂಟೆ ಅವಧಿಯಲ್ಲಿ ಮನೆಯ ಮುಂದಿನ ಚಪ್ಪಲ್, ಸೈಕಲ್ ಹಾಗು ಇತರೆ ವಸ್ತುಗಳನ್ನು ಕಳ್ಳತನ ಮಾಡುತ್ತಿರುವುದರಿಂದ 3.00 ರಿಂದ 4.00 ಗಂಟೆ ಅವಧಿಯಲ್ಲಿ ಪೋಲೀಸರನ್ನು ನೇಮಿಸಲು ಈ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಕ್ರಮ ವಹಿಸಲು ಸಭೆಗೆ ತಿಳಿಸಿದರು. | **Banasawadi Police Station**<br>**(Traffic Department)** |

| | | |
|---|---|---|
| 6 | ಸ್ಥಳೀಯರು, ಬಾಣಸವಾಡಿ ರವರು ಮಾತನಾಡಿ ಸ್ವತ್ತಿನ ಸಂಖ್ಯೆ.435, 9ನೇ ಸಿ ಮೇನ್ ಮತ್ತು 9ನೇ ಬಿ ಮೇನ್‌ಗಳಲ್ಲಿ ಡಿ-ಶಿಲ್ಟ್ ಮಾಡಲು ಸಭೆಯಲ್ಲಿ ಪ್ರಸ್ತಾಪಿಸಿದರು. | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಈ ಪ್ರದೇಶದಲ್ಲಿ ಶಿಲ್ಟ್ ತೆರವುಗೊಳಿಸಲು 2022-23ನೇ ಸಾಲಿನ Flood Preventive and Protective works ಅನುದಾನದಲ್ಲಿ ತೆಗೆದುಕೊಳ್ಳಲಾಗಿದ್ದು, ಕಾರ್ಯಾದೇಶದ ಹಂತದಲ್ಲಿದ್ದು, ಅತೀ ಶೀಘ್ರವಾಗಿ ಡಿ ಶಿಲ್ಟ್ ತೆರವು ಕಾಮಗಾರಿಯನ್ನು ಕೈಗೊಳ್ಳುವುದಾಗಿ ಸಭೆಗೆ ತಿಳಿಸಲಾಯಿತು. |
| 7 | ಒಎಂಬಿಆರ್ 4ನೇ ಕ್ರಾಸ್, ಐಸಿಐಸಿಐ ಬ್ಯಾಂಕ್‌ನ ಹತ್ತಿರ ರಸ್ತೆಗುಂಡಿಯನ್ನು ಮುಚ್ಚದೇ ಇರುವುದರಿಂದ ವಾಹನ ಸವಾರರು ಬಿದ್ದು, ಸವಾರರಿಗೆ ತೊಂದರೆಯಾಗುವ ಸಾಧ್ಯತೆ ಇರುವುದರಿಂದ, ರಸ್ತೆಗುಂಡಿಯನ್ನು ಕೂಡಲೇ ಮುಚ್ಚಲು ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP**<br>ರಸ್ತೆ ಗುಂಡಿಯನ್ನು ದುರಸ್ತಿಪಡಿಸಲಾಗಿದೆ. |
| 8 | ಬಾಣಸವಾಡಿ ವಾರ್ಡ್ ವ್ಯಾಪ್ತಿಯ 3ನೇ ಸಿ ಕ್ರಾಸ್, 6ನೇ ಎ ಮೇನ್‌ಗಳಲ್ಲಿ ರಸ್ತೆ ಬದಿಯಲ್ಲಿ ಬಿದ್ದಿರುವ ಜಿಯೋ ರವರ ಐಸೋಲೇಷನ್ ಹ್ಯಾಂಡಲ್‌ಗಳನ್ನು ಸದರಿ ಸ್ಥಳದಿಂದ ತೆರವುಗೊಳಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP** |
| 9 | ವಾರ್ಡ್ ವ್ಯಾಪ್ತಿಯಲ್ಲಿನ 8ನೇ ಎ ಮೇನ್‌ನಲ್ಲಿ ಮರದ ರೆಂಬೆಕೊಂಬೆಗಳು ಬೆಳೆದು ನಿಂತಿದ್ದು ಅವುಗಳನ್ನು ಕಟಾವು ಮಾಡಲು ಸಂಬಂಧಪಟ್ಟ ಇಲಾಖೆಯವರು ಕ್ರಮ ವಹಿಸಲು ಸಭೆಗೆ ತಿಳಿಸಿದರು. | **(ವಲಯ ಅರಣ್ಯಾಧಿಕಾರಿಗಳು)**<br>**(Forest Department)**<br>ವಾರ್ಡ್ ವ್ಯಾಪ್ತಿಯಲ್ಲಿರುವ ಹಳೆಯ ಮರದ ಕೊಂಬೆ ರೆಂಬೆಗಳನ್ನು ಕಟಾವು ಮಾಡಲು ಕ್ರಮ ವಹಿಸುವುದು |
| 10 | ಬಾಣಸವಾಡಿ ವ್ಯಾಪ್ತಿಯ ಚರ್ಚ್ ರಸ್ತೆ, 2ನೇ ಮುಖ್ಯರಸ್ತೆ, ಹಾಗೂ ಆರ್.ಓ ಪ್ಲಾಂಟ್, 8ನೇ ಬಿ ಮೇನ್, ಬಂಡೆಪಾರ್ಕ್ ರಸ್ತೆಗಳಲ್ಲಿ ಜಿಯೋ ರವರು ಪೂರ್ಣ ರೆಸ್ಟೋರೇಷನ್ ಮಾಡಿಲ್ಲದಿರುವುದರಿಂದ ಸಂಬಂಧಪಟ್ಟ ಇಲಾಖೆಯವರು ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP** |
| 11 | ಬಾಣಸವಾಡಿ ವ್ಯಾಪ್ತಿಯ ಗಂಗಾ ಸ್ಟೀಲ್ ರಸ್ತೆಯಿಂದ ಇಂಪೀರಿಯಾ ಹೋಟೆಲ್ ವರೆಗೂ ರಸ್ತೆ ಹಾಳಾಗಿದ್ದು, ಪೂರ್ಣ ಡಾಂಬರೀಕರಣವನ್ನು ಮಾಡಲು ಸಂಬಂಧಪಟ್ಟ ಇಲಾಖೆಯವರು ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- Major Road** |

ಕೊನೆಯದಾಗಿ ಮಾನ್ಯ ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ಮಾತನಾಡಿ, ಇಂದಿನ ವಾರ್ಡ್ ಕಮಿಟಿ ಸಭೆಗೆ ಗೈರು ಹಾಜರಾಗಿರುವ ಅಧಿಕಾರಿ/ನೌಕರರು ಕಡ್ಡಾಯವಾಗಿ ಮುಂದಿನ ಸಭೆಗೆ ಹಾಜರಿರಲು ಕ್ರಮ ವಹಿಸಲು ಸೂಚಿಸಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

18/10/2022

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.27/100, ಬಾಣಸವಾಡಿ

18/10/22

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.27/100, ಬಾಣಸವಾಡಿ

***ಪ್ರತಿಯನ್ನು***

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ವಾರ್ಡ್ ಕಮಿಟಿಯ ಸದಸ್ಯರಿಗೆ/ಕಛೇರಿ ಕಡತಕ್ಕೆ.